## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

**ಸಿ.ಸಿ. ಸಂಖ್ಯೆಃ 207/2024**

**ಸಾಕ್ಷಿಯನ್ನು ದಿಃ 09.12.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಪುಟ್ಟರಾಜು | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಈರೇಗೌಡ | | |
| ವಯಸ್ಸು | 56 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಕಲ್ಲುಣಿಕೆ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1, 2 ಮತ್ತು 4 ಗೊತ್ತು. ನ್ಯಾಯಾಲಯದ ಮುಂದಿರುವ 2ನೇ ಆರೋಪಿ ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಗೊತ್ತು. ದಿಃ 19.01.2024ರಂದು ಸಂಜೆ 4 ಗಂಟೆಗೆ ನಾನು ನನ್ನ ಮನೆಯ ಬಳಿ ಇದ್ದಾಗ, ಚಾಸಾ-2 ರವರ ಮನೆಯ ಬಳಿ ಗಲಾಟೆಯ ಶಬ್ದ ಕೇಳಿ ಬಂತು ನಾನು ಮನೆಯಿಂದ ಹೊರಗೆ ಬಂದೆ. ಚಾಸಾ-2, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಗಲಾಟೆ ಮಾಡಿಕೊಳ್ಳುತ್ತಿದ್ದರು. ಚಾಸಾ-2 ರವರು ಗಲಾಟೆಯಲ್ಲಿ ಕೆಳಗೆ ಬಿದ್ದಿದ್ದರು. ನಾನು ಅವರನ್ನು ಬಿಡಿಸಲು ಹೋದೆ. ನಾನು ಗಲಾಟೆಯನ್ನು ನೋಡಿ ಬಿಡಿಸಿದೆ. ನಾನು ಬರುವಷ್ಟರಲ್ಲಿ ಗಲಾಟೆ ಮುಗಿದಿತ್ತು. ಯಾರು ಯಾರಿಗೆ ಹೊಡೆದರು ಎಂದು ನೋಡಿಲ್ಲ. ಚಾಸಾ-2 ರವರು ದೂರು ಕೊಡಲು ಹೋದರು. ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ಮೇಲೆ ಹೇಳಿದ ದಿನಾಂಕ ಮತ್ತು ಸಮಯದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ.2 ರವರ ಮನೆಗೆ ನುಗ್ಗಿ ಬಾಯಿಗೆ ಬಂದಂತೆ ಸೂಳೆ ಮುಂಡೆ, ಲೋಫರ್

ಮುಂಡೆ ಎಂದು ಬೈದು ಏಕಾ ಏಕಿ ಚಾಸಾ-1 ರವರ ನೈಟಿಯ ಮುಂಭಾಗದಲ್ಲಿ ಬಿಗಿಯಾಗಿ ಹಿಡಿದು ದರದರನೆ ಎಳೆದುಕೊಂಡು ಬಂದು ರಸ್ತೆಯಲ್ಲಿ ಕೆಳಕ್ಕೆ ಕೆಡವಿ ಕಾಲಿನಿಂದ ಹೊಟ್ಟೆಗೆ ಒದ್ದು, ಕೈಯಿಂದ ಬಲಭಾಗದ ಕತ್ತಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ಬಿಡಿಸಲು ಬಂದ ಚಾಸಾ-2 ರವರಿಗೆ 2ನೇ ಆರೋಪಿಯು ಕೈಯಿಂದ ಮೈಕೈಗೆ ಮತ್ತು ತುಟಿಗೆ ಹೊಡೆದು ರಕ್ತಗಾಯ ಮಾಡಿದ್ದು, ಹಾಗೂ ರಸ್ತೆಯಲ್ಲಿ ಎಲ್ಲರ ಮುಂದೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ-1 ರವರ ನೈಟಿಯನ್ನು ಹರಿದುಹಾಕಿ ಅವಮಾನ ಮಾಡಿದ್ದು, ಆಗ ನಾನು ಮತ್ತು ಚಾಸಾ-4 ರವರು ಹೋಗಿ ಗಲಾಟೆ ಬಿಡಿಸಿದೆವು ಎಂದರೆ ಸರಿ. ನಂತರ ಚಾಸಾ-1 ಮತ್ತು 2 ರವರು ಆಟೋದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.HK ಪರ ಶ್ರೀ. DRM ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯವು Special leave petition (Criminal) No.969/2025 between central Buro of investigation V/s Mir Usman alias Ara alias Mir Usman Ali ದಿಃ 22.09.2025 ರಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ನಡೆಸುವ ಬಗ್ಗೆ ಕೆಲವು ತತ್ವಗಳನ್ನು ಮತ್ತು ನಿಯಮಗಳನ್ನು ರೂಪಿಸಿದ್ದು, ಅದನ್ನು ಅನ್ವಯಿಸುತ್ತಾ ವಕೀಲರು ಮಾಡಿದ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು